<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 218/2025**

| ಸಾಕ್ಷಿಯ ಹೆಸರು | ಶ್ರೀ. ಶಾಂತಕುಮಾರ್ | ಚಾಸಾಃ | ಫ್ರಾಸಾಃ |
|---|---|---|---|
| ತಂದೆಯ ಹೆಸರು | ನಾಗರಾಜು | 1 | 1 |
| ವಯಸ್ಸು | 49 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **01.06.2026.** | |
| ಉದ್ಯೋಗ | ಚಾಲಕ | | |
| ವಾಸ ಸ್ಥಳ | ಅಗಲಕುಪ್ಪೆ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ 1. ಆರೋಪಿ ಗೊತ್ತು ಆತ ನನ್ನ ಸಂಬಂಧಿ. ಚಾಸಾ. 2 ರವರು ನನ್ನ ತಂದೆ. ಚಾಸಾ. 3 ರವರು ನನ್ನ ಅಣ್ಣನ ಮಗ. 23.02.2025 ರಂದು ಭಾನುವಾರ ರಾತ್ರಿ 12.15 ಕ್ಕೆ ರಾಕೇಶ್ ಮತ್ತು ನಾಗೇಶ್ ಸಣ್ಣದಾಗಿ ಜಗಳ ಮಾಡಿಕೊಳ್ಳುತ್ತಿದ್ದರು. ನಾನು ಬಿಡಿಸಿಕೊಳ್ಳಲು ಹೋದಾಗ ನನ್ನ ಬಲ ಕೈ ಗೆ ಪೆಟ್ಟಾಯಿತು. ನಂತರ ನನ್ನನ್ನು ದಾಬಸ್ ಪೇಟೆಯ ಜಿಂದಾಲ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ನನ್ನ ಕೈ ಬಲಕ್ಕೈ ಮೂಳೆ ಮುರಿದಿತ್ತು. ನಂತರ ನಾನು ದಿನಾಂಕ 25.02.2025 ಕ್ಕೆ ದಾಬಸ್ ಪೇಟೆ ಠಾಣೆಯಲ್ಲಿ ದೂರು ನೀಡಿದ್ದೆ. ಸಾಕ್ಷಿ ದೂರನ್ನು ಗುರುತಿಸಿದ್ದು ಅದನ್ನು ನಿಶಾನೆ.ಪಿ. 1 ಎಂದು ಗುರುತಿಸಲಾಯಿತು. ಸಾಕ್ಷಿ ದೂರಿಗೆ ಹೆಬ್ಬೆಟಿನ ಸಹಿ ಹಾಕಿರುತ್ತಾರೆ.

2. ನಂತರ ಪೊಲೀಸರು ಬಂದು ಮಹಜರ್ ಮಾಡಿದ್ದರು. ಸಾಕ್ಷಿ ಮಹಜರ್ ಅನ್ನು ಗುರುತಿಸಿದ್ದು ಅದನ್ನು ನಿಶಾನೆ.ಪಿ. 2 ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರ್ ಗೆ ಹೆಬ್ಬೆಟಿನ ಸಹಿ ಹಾಕಿರುತ್ತಾರೆ. ಮಹಜರ್ ಸಮಯದಲ್ಲಿ ಫೋಟೋ ತೆಗೆದಿದ್ದು ಅದನ್ನು ನಿಶಾನೆ.ಪಿ. 3 ಎಂದು ಗುರುಸಲಾಯಿತು. ಆರೋಪಿ ಎಂದೂ ನನ್ನ ಜೊತೆಗೆ ಜಗಳ ಮಾಡಿಲ್ಲ ಮತ್ತು ಹೊಡೆದಿಲ್ಲ. ನಿಶಾನೆ.ಪಿ. 1 ಮತ್ತು 2 ಒಕ್ಕಣೆ ಗೊತ್ತಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ ನನಗೂ ಮತ್ತು ಆರೋಪಿಗೂ ಹಣಕಾಸಿನ ವ್ಯವಹಾರ ಇತ್ತು ಎಂದರೆ ಈಗ ಇರುವುದಿಲ್ಲ. ದಿನಾಂಕ 23.02.2025 ರಂದು ರಾತ್ರಿ ಸುಮಾರು 12:15 ಗಂಟೆ ಸಮಯದಲ್ಲಿ ಆರೋಪಿ ವಾಸವಾಗಿರುವ ಮನೆಯ ಮುಂಭಾಗದಲ್ಲಿ, ಚಾಸಾ. 3 ರಿಂದ 5 ರವರುಗಳು ಜೋರಾಗಿ ಮಾತನಾಡಿಕೊಂಡು ನಿಂತಿದ್ದಾಗ, ಏನೋ ಗಲಾಟೆ ನಡೆಯುತ್ತಿರಬಹುದು ಎಂದು ನಾನು ಮನೆಯಿಂದ ಆಚೆ ಬಂದು ನೋಡುತ್ತಾ ನಿಂತಿದ್ದನ್ನು ಆರೋಪಿ ನೋಡಿ, ಅವೇಳೆಯಾಗಿದ್ದರಿಂದ ಇವನು ಪದೇ ಪದೇ ಹಣ ಕೇಳುತ್ತಾನೆ, ಇವನಿಗೆ ಒಂದು ಗತಿ ಕಾಣಿಸಲು ಇದೇ ಸರಿಯಾದ ಸಮಯ ಎಂದುಕೊಂಡು ಆರೋಪಿಯಾದ ನೀನು ನಿನ್ನ ಮನೆಯ ಕಾಂಪೌಂಡ್ ಒಳಗೆ ಬಿದ್ದಿದ್ದ ಒಂದು ದೊಣ್ಣೆಯನ್ನು ತಂದು ನನಗೆ ಏನೋ ಬೋಳಿ ಮಗನೆ ನನ್ನನ್ನೇ ದುರುಗುಟ್ಟಿಕೊಂಡು ನೋಡುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು, ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಹೊಡೆಯಲು ಬಂದಾಗ ಕೈಗಳು ಅಡ್ಡ ಇಟ್ಟಿದ್ದಾಗ ತಲೆಗೆ ಬೀಳಬೇಕಾದ ಏಟಿನಿಂದ ಕೈಗೆ ಹೊಡೆದು ಮೂಳೆ ಮುರಿದಿದ್ದಾನೆ ಎಂದರೆ ಸರಿ ಅಲ್ಲ. ಆರೋಪಿ ದೊಣ್ಣೆಯಿಂದ ಹೊಡೆದಿದ್ದರಿಂದ ನನಗೆ ಮೂಳೆ ಮುರಿತವಾಗಿದ್ದು ನಾನು ಬಿದಿದ್ದರಿಂದ ಅಲ್ಲ ಎಂದರೆ ಸರಿ ಅಲ್ಲ. ಆರೋಪಿ ನನ್ನ ಸಂಬಂಧಿಕರಾಗಿದ್ದರಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಅದರ ಸಂಬಂಧವಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ ಅಲ್ಲ. ಸಾಕ್ಷಿ ಹೇಳಿಕೆಯ ಭಾಗವನ್ನು ಓದಿ ತೋರಿಸಿದಾಗ ಸಾಕ್ಷಿ ನಿರಾಕರಿಸಿದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಶಾನೆ.ಪಿ. 4 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದೊಣ್ಣೆಯಿಂದ ಆರೋಪಿ ಹಲ್ಲೆ ಮಾಡಿದ್ದಾರೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿ : ಇಲ್ಲ ಎಂದು ಹೇಳಿರುತ್ತಾರೆ.

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.